■ ವಿಶಾಖ ಎನ್.

# ಬೇಷರಮ್ ಗುಂಡಿಯೊಳಗೆ ಪಠಾಣ್



ಶಾರುಖ್ ಖಾನ್, ದೀಪಿಕಾ

ಬಟ್ಟೆಯ ಬಣ್ಣ ಬದಲಿಸುವಂತೆ ಸೂಚಿಸುವ ನಿಯಮಾವಳಿ ಸೆನ್ಸಾರ್ ಮಂಡಳಿಯಲ್ಲಿ ಇದೆಯೇ ಎನ್ನುವ ಮುಖ್ಯವಾದ ಪ್ರಶ್ನೆಯೊಂದು ಈಗ ಚಾಲ್ತಿಯಲ್ಲಿದೆ. 'ಪಠಾಣ್' ಹಿಂದಿ ಸಿನಿಮಾದ 'ಬೇಷರಮ್ ರಂಗ್' ಹಾಡಿನಲ್ಲಿ ಕೇಸರಿ ಬಣ್ಣದ ಬಿಕಿನಿಯಲ್ಲಿ ದೀಪಿಕಾ ಪಡುಕೋಣೆ ಕೆಲವೇ ಸೆಕೆಂಡುಗಳು ಕಾಣಿಸಿಕೊಂಡಿದ್ದರೂ ಅದು ಸೃಷ್ಟಿಸಿರುವ ವಿವಾದ ಪುಟಗಟ್ಟಲೆ ವಾಕ್ಯಗಳನ್ನು ಬರೆಸಿಕೊಳ್ಳುವ ಮಟ್ಟಕ್ಕೆ ಬೆಳೆದಿದೆ. ಕೇಂದ್ರ ಸೆನ್ಸಾರ್ ಬೋರ್ಡ್ ಅಧ್ಯಕ್ಷ ಪ್ರಸೂನ್ ಜೋಶಿ ವಿವಾದವನ್ನು ತಣ್ಣಗಾಗಿಸುವ ಪ್ರಯತ್ನ ತಮ್ಮದೆನ್ನುವಂತೆ ಮಾತನಾಡಿ, ಆ ಹಾಡೂ ಸೇರಿದಂತೆ ಸಿನಿಮಾದಲ್ಲಿ ಕೆಲವು ಬದಲಾವಣೆಗಳಿಗೆ ಸೂಚಿಸಲಾಗಿದೆ ಎಂದಿದ್ದಾರೆ.

ಸೆನ್ಸಾರ್ ಮಂಡಳಿ ಬಿಡುಗಡೆಗೆ ಮುನ್ನ ಸಿನಿಮಾಗಳಿಗೆ ಪ್ರಮಾಣಪತ್ರ ನೀಡುವುದು ಕ್ರಮ. ವಸ್ತುವಿಷಯ, ದೃಶ್ಯಾವಳಿಗೆ ಪೂರಕವಾಗಿ 'ಎ', 'ಯು/ಎ', 'ಯು' ತರಹದ ಪ್ರಮಾಣಪತ್ರಗಳನ್ನು ನೀಡುತ್ತದೆ. ಮಕ್ಕಳ ಚಿತ್ರಗಳಿಗೆ 'ಸಿ' ಪ್ರಮಾಣಪತ್ರ ನೀಡುತ್ತದೆ. ಹೀಗೆ ಪ್ರಮಾಣಪತ್ರ ನೀಡಲು ಕೆಲವು ನಿಯಮಾವಳಿಗಳಿವೆ. ಪ್ರಸೂನ್ ಜೋಶಿ ಸಿನಿಮಾ ಹಾಡಿನ ಬಿಕಿನಿಯ ಬಣ್ಣ ಬದಲಿಸಲು ಸೂಚಿಸಿದ್ದಾರೋ ಇಲ್ಲವೋ ಎನ್ನುವುದನ್ನು ಸ್ಪಷ್ಟವಾಗಿ ಹೇಳಿಲ್ಲ. ಆದರೆ, ಅವರದ್ದೇ ಸ್ಥಾನದಲ್ಲಿ ಹಿಂದೆ ಕೆಲಸ ನಿರ್ವಹಿಸಿದ ಪಹಲಾಜ್ ನಿಹಲಾನಿ ಈ ವಿಷಯದ ಕುರಿತು ಮಹತ್ವದ ಪ್ರತಿಕ್ರಿಯೆ ನೀಡಿದ್ದಾರೆ.

'ಯಾವುದೇ ಸಿನಿಮಾದ ಪಾತ್ರದ ಉಡುಗೆಯ ಬಣ್ಣದ ಕಾರಣಕ್ಕೆ ಕಟ್ಸ್ ಅಥವಾ ಮಾರ್ಪಾಡು ಹೇಳುವಂತಹ ನಿಯಮ ಸೆನ್ಸಾರ್ ಮಂಡಳಿಯಲ್ಲಿ ಇಲ್ಲ. ಸಚಿವಾಲಯದಿಂದ ಪಠಾಣ್ ಸಿನಿಮಾ ವಿಷಯದಲ್ಲಿ ಒತ್ತಡ ಬಂದಿರಬಹುದು. ಬಣ್ಣದ ಕಾರಣಕ್ಕೇ ಕಟ್ಸ್ ಹೇಳಿದ್ದರೆ ಅದು ನಿಯಮಾವಳಿಗಳ ಉಲ್ಲಂಘನೆಯೇ ಸರಿ. ಟ್ರೇಲರ್‌ನಲ್ಲಿ ಅದೇ ಉಡುಗೆ ಇರುವುದನ್ನು ಹೇಗೆ ಕ್ಲಿಯರ್ ಮಾಡಿದ್ದರು' ಎನ್ನುವ ಪ್ರಶ್ನೆಯನ್ನು ಪಹಲಾಜ್ ಮುಂದಿಟ್ಟಿದ್ದಾರೆ.

'ಈ ರೀತಿಯ ಕಟ್ಸ್ ಸೂಚಿಸಿದ ಮೇಲೆ ಮರುಪರಿಶೀಲನಾ ಸಮಿತಿಯು ಇನ್ನೊಮ್ಮೆ ಸಿನಿಮಾವನ್ನು ನೋಡಬೇಕು. ಆಗ ಪ್ರಸೂನ್ ಜೋಶಿ ಅವರೊಟ್ಟಿಗೆ ಸಿನಿಮಾ ನೋಡುವಹಾಗಿಲ್ಲ. ಈ ಪ್ರಕರಣದಲ್ಲಿ ಅದು ಪಾಲನೆಯಾಗುವುದೋ ಇಲ್ಲವೋ ಎನ್ನುವುದನ್ನೂ ಗಮನಿಸಬೇಕಿದೆ' ಎಂದು ಪಹಲಾಜ್ ಮಾತು ಸೇರಿಸಿದರು.

ಸೆನ್ಸಾರ್ ಮಂಡಳಿಯ ಸೂಕ್ಷ್ಮಗಳ ಬಗೆಗೆ ಮಾತನಾಡಿದ ನಂತರ ಅವರು 'ಪಠಾಣ್ ತಾನೇ ಸೃಷ್ಟಿಸಿಕೊಂಡ ವಿವಾದದಿಂದಾಗಿ ಈ ಒತ್ತಡದ ಸ್ಥಿತಿಗೆ ತಲುಪಿದೆ' ಎಂದೂ ಹೇಳಿದ್ದಾರೆ.

'ಬೇಷರಮ್ ರಂಗ್' ಹಾಡಿನಲ್ಲಿ ದೀಪಿಕಾ ಬೇರೆ ಬೇರೆ ಬಣ್ಣದ ಬಿಕಿನಿಗಳನ್ನು ತೊಟ್ಟಿದ್ದಾರೆ. ಕೇಸರಿ ಬಿಕಿನಿಯು ಬಿಡುಗಡೆಯಾಗಲಿರುವ ಚಲನಚಿತ್ರದಲ್ಲಿ ಇರುವುದೋ ಇಲ್ಲವೋ ಎನ್ನುವ ಪ್ರಶ್ನೆಯೂ ಈಗ ಉಳಿದಿದೆ. ■

## ಶಾರುಖ್ ಜೊತೆ ಸೇತುಪತಿ



ಒಂದು ಕಡೆ ವಿವಾದದ ಮೂಟೆ. ಇನ್ನೊಂದು ಕಡೆ ಧ್ರುವೀಕರಣದ ಪ್ರಯೋಗ. ಶಾರುಖ್ ಖಾನ್ ಸಿನಿಮಾದಲ್ಲಿ ವಿಜಯ್ ಸೇತುಪತಿ ನಟಿಸಿದರೆ ಹೇಗಿದ್ದೀತು? ಅದಕ್ಕೆ ಉತ್ತರ ದೊರೆಯುವುದೀಗ ನಿಕ್ಕಿಯಾಗಿದೆ. ಅಟ್ಲಿ ನಿರ್ದೇಶಿಸುತ್ತಿರುವ 'ಜವಾನ್' ಸಿನಿಮಾದಲ್ಲಿ ಶಾರುಖ್ ಖಾನ್ ಜೊತೆ ವಿಜಯ್ ಸೇತುಪತಿ ಅಭಿನಯಿಸಲಿದ್ದಾರೆ.

ಕಮಲ ಹಾಸನ್ ಜತೆಯಲ್ಲಿ 'ವಿಕ್ರಂ' ಸಿನಿಮಾದಲ್ಲಿ ವಿಜಯ್ ಸೇತುಪತಿ, ಫಹಾದ್ ಫಾಸಿಲ್ ಇಬ್ಬರೂ ಅಭಿನಯಿಸಿದ್ದರು. ಆ ಸಮೀಕರಣ ಬಾಕ್ಸಾಫೀಸ್ ಗಳಿಕೆಗೂ ಅನುಕೂಲಕರವಾಗಿತ್ತು. ವಿಜಯ್ ನಟಿಸಿದ್ದ ತಮಿಳಿನ 'ಮಾಸ್ಟರ್'ನಲ್ಲಿ ನಾಯಕನ ಪಾತ್ರಕ್ಕೆ ಇದ್ದಷ್ಟೇ ತೂಕ ಪ್ರತಿನಾಯಕನಾದ ವಿಜಯ್ ಸೇತುಪತಿ ಪಾತ್ರಕ್ಕೂ ಇತ್ತು. ಅದೂ ಆದಾಯ ಗಳಿಕೆಗೆ ಪೂರಕವಾಗಿ ಒದಗಿಬಂದಿತ್ತು.

ಬಹುತಾರಾಗಣದ ಹಾಗೂ ಉತ್ತರ–ದಕ್ಷಿಣದ ಧ್ರುವೀಕರಣದ ಇಂತಹ ತಂತ್ರಗಳನ್ನು ಬಾಲಿವುಡ್ ಇನ್ನುಮುಂದೆ ವ್ಯಾಪಕವಾಗಿ ಅನುಷ್ಠಾನಕ್ಕೆ ತರುವ ಸಾಧ್ಯತೆ ಇದೆ. ಕಮರ್ಷಿಯಲ್ ಸಿನಿಮಾಗಳನ್ನು ಕಣ್ಣುಕೀಲಿಸಿ ನೋಡುವಂತೆ ಮಾಡಬಲ್ಲ ನಿರ್ದೇಶಕ ಅಟ್ಲಿಯನ್ನು ಶಾರುಖ್ ಹೈಜಾಕ್ ಮಾಡಿರುವುದು ಇದೇ ಕಾರಣಕ್ಕೆ. ಈ ಹಿಂದೆ ಸಲ್ಮಾನ್ ಖಾನ್ ಕೂಡ ಪ್ರಭುದೇವ ಅವರಿಂದ ಸಿನಿಮಾ ನಿರ್ದೇಶನ ಮಾಡಿಸಿ, ಗೆದ್ದ ಉದಾಹರಣೆ ಇದೆ.

ವಿಜಯ್ ಸೇತುಪತಿ ಅಭಿನಯದ ಸಾಹಸಪ್ರಧಾನವೂ ಹಾಸ್ಯಭರಿತವೂ ಆದ ತಮಿಳು ಸಿನಿಮಾ 'ಡಿಎಸ್‌ಪಿ' ನಿರೀಕ್ಷಿತ ಯಶಸ್ಸನ್ನು ತರಲಿಲ್ಲ. ನೆಟ್‌ಫ್ಲಿಕ್ಸ್ ಕಳೆದ ವಾರವಷ್ಟೆ ಅದನ್ನು ಒಟಿಟಿಯಲ್ಲಿ ಬಿಡುಗಡೆ ಮಾಡಿದೆ. ಶಾರುಖ್–ಸೇತುಪತಿ ಹೊಸ ಅಧ್ಯಾಯದ ಕುರಿತು ಕಣ್ಣಗಲಿಸಿಕೊಳ್ಳುವುದೀಗ ಬಾಕಿ. ■